# ಭಕ್ತಿಯ ಬಗೆಗಳು

❁ ಮುಖ್ಯವಾಗಿ ಬೇಕಾದದ್ದು ಸಚ್ಚಿದಾನಂದನಲ್ಲಿ ಪ್ರೀತಿ. ಎಂಥ ಪ್ರೀತಿ? ಭಗವಂತನನ್ನು ಯಾವ ರೀತಿಯಾಗಿ ಪ್ರೀತಿಸಬೇಕು? ಗೌರೀ ಪಂಡಿತ ಹೇಳುತ್ತಿದ್ದ, ರಾಮನನ್ನು ಅರಿತುಕೊಳ್ಳಬೇಕಾದರೆ, ಸೀತೆಯಂತೆಯೇ ಆಗಬೇಕು: ಭಗವಂತನನ್ನು ಅರಿಯಬೇಕಾದರೆ, ಭಗವತಿಯಂತೆ ಆಗಬೇಕು. ಭಗವತಿ ಯಾವ ರೀತಿಯಾಗಿ ಶಿವನಿಗಾಗಿ ಕಠೋರ ತಪಸ್ಸು ಮಾಡಿದಳೊ, ಆ ರೀತಿಯಾಗಿ ತಪಸ್ಸು ಮಾಡಬೇಕು. ಪುರುಷನನ್ನು ಅರಿಯಬೇಕಾದರೆ, ಪ್ರಕೃತಿಭಾವವನ್ನು ಆರೋಪಿಸಿಕೊಳ್ಳಬೇಕು – ಎಂದರೆ ಸಖೀಭಾವ, ದಾಸೀಭಾವ, ಮಾತೃಭಾವಗಳನ್ನು.



❁ ಹುಚ್ಚು! ಅದು ಬರಬೇಕು. ಭಗವಂತನ ಸಾಕ್ಷಾತ್ಕಾರ ದೊರಕಬೇಕಾದರೆ ಆತನಿಗಾಗಿ ಹುಚ್ಚು ಹಿಡಿಯಬೇಕು. ಕಾಮಕಾಂಚನಗಳ ಕಡೆಗೆ ಮನಸ್ಸಿತ್ತು ಎಂದರೆ ಅದು ಉಂಟಾಗದು.

❁ **ಶಿಷ್ಯ:** ಯಾವುದಕ್ಕೆ ತ್ರಿಗುಣಾತೀತ ಭಕ್ತಿ ಅಂತ ಹೇಳುತ್ತಾರೆ?

**ಶ್ರೀರಾಮಕೃಷ್ಣರು:** ಆ ಭಕ್ತಿಯುಂಟಾಯಿತು ಎಂದರೆ, ಎಲ್ಲವೂ ಚಿನ್ಮಯವಾಗಿ ಕಾಣುತ್ತದೆ. ಆತನಿಗೆ 'ಶ್ಯಾಮ ಚಿನ್ಮಯ.' ಆತನ 'ಧಾಮವೂ ಚಿನ್ಮಯ.' ಭಕ್ತನೂ ಚಿನ್ಮಯ. ಎಲ್ಲವೂ ಚಿನ್ಮಯ. ಎಲ್ಲೋ ಕೆಲವರಿಗೆ ಮಾತ್ರ ಆ ವಿಧದ ಭಕ್ತಿಯುಂಟಾಗುತ್ತದೆ.

❁ **ಶಿಷ್ಯ:** ತ್ರಿಗುಣಾತೀತ ಭಕ್ತಿ – ಎಂದರೆ ಭಕ್ತ ಯಾವ ಗುಣಕ್ಕೂ ವಶನಲ್ಲ ಅಂತ.

**ಶ್ರೀರಾಮಕೃಷ್ಣರು:** ಹೌದು, ಅದೇ. ಐದು ವರ್ಷ ಬಾಲಕನ ಹಾಗೆ – ಯಾವ ಗುಣಕ್ಕೂ ವಶವಾಗದವನಾಗಿ.

❁ ಕೆಲವು ವೇಳೆ ಭಗವಂತ ಸೂಜಿಗಲ್ಲಾಗುತ್ತಾನೆ, ಭಕ್ತ ಸೂಜಿಯಾಗುತ್ತಾನೆ. ಇನ್ನು ಕೆಲವು ವೇಳೆ ಭಕ್ತ ಸೂಜಿಗಲ್ಲಾಗುತ್ತಾನೆ, ಭಗವಂತ ಸೂಜಿಯಾಗುತ್ತಾನೆ. ಭಕ್ತ ಆತನನ್ನು ಸೆಳೆದುಕೊಂಡು ಬಿಡುತ್ತಾನೆ. ಭಗವಂತ ಭಕ್ತವತ್ಸಲ, ಭಕ್ತಪರಾಧೀನ.

❁ ಗೋಪಿಯರದು ಪ್ರೇಮಾಭಕ್ತಿ. ಇದರಲ್ಲಿ ಎರಡು ಭಾವಗಳಿವೆ – ಅಹಂಕಾರ, ಮಮಕಾರ. ನಾನು ಕೃಷ್ಣನ ಸೇವೆ ಮಾಡದಿದ್ದರೆ ಆತನಿಗೆ ಅಸೌಖ್ಯವುಂಟಾಗುತ್ತದೆ ಎಂಬ ಭಾವನೆಗೆ ಅಹಂಕಾರ ಎಂದು ಹೆಸರು. ಈ ಭಾವದಲ್ಲಿ ಭಕ್ತ ಭಗವಂತನನ್ನು ಭಗವಂತನೆಂದು ಭಾವಿಸುವುದಿಲ್ಲ, ಆತನಿಗೆ ಭಗವದ್ಬೋಧೆ ಇರದು.

❁ ಮಮತೆ – 'ನನ್ನದು, ನನ್ನದು' ಎನ್ನುವುದು. ಗೋಪಿಯರಿಗೆ ಶ್ರೀಕೃಷ್ಣನಲ್ಲಿ ಅಂಥ ಮಮತೆ, ಆತನ ಪಾದಗಳು ನೋಯಬಹುದೆಂದು ಅವರು ತಮ್ಮ ಸೂಕ್ಷ್ಮ ಶರೀರಗಳನ್ನು ಆತನ ಪಾದದಡಿಯಲ್ಲಿ ಇಡುತ್ತಿದ್ದರು.

❁ **ಶಿಷ್ಯ:** ಏನು ಮಾಡಿದರೆ ಭಗವಂತನ ಕೃಪೆಯೊದಗುತ್ತದೆ?

**ಶ್ರೀರಾಮಕೃಷ್ಣರು:** ಭಗವಂತನ ನಾಮಗುಣ ಕೀರ್ತನೆಯನ್ನು ಸರ್ವದಾ ಮಾಡುತ್ತಿರಬೇಕು. ವಿಷಯಚಿಂತನೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ತ್ಯಜಿಸಬೇಕು. ನೀನು ಬೆಳೆ ಬೆಳೆಯಲು ಬಹಳ ಶ್ರಮವಹಿಸಿ ಗದ್ದೆಗೆ ನೀರು ತರಬಹುದು. ಆದರೆ ತೆವರಿಯಲ್ಲಿರುವ ಬಿಲಗಳ ಮೂಲಕ ನೀರೆಲ್ಲಾ ಹೊರಕ್ಕೆ ಹರಿದುಹೋಗಿ ಬಿಡುತ್ತದೆ ಅಂತ ಇಟ್ಟುಕೋ. ಆಗ ನಾಲೆ ತೋಡಿ ನೀರು ತಂದದ್ದೆ ವೃಥಾ ಪರಿಶ್ರಮ.

❁ ಚಿತ್ತಶುದ್ಧಿಯಾಯಿತು ಎಂದರೆ, ವಿಷಯಾಸಕ್ತಿ ಹೊರಟುಹೋಯಿತು ಅಂದರೆ, ವ್ಯಾಕುಲತೆಯುಂಟಾಗುತ್ತದೆ. ಆಗ ಮಾತ್ರವೇ ನಿನ್ನ ಪ್ರಾರ್ಥನೆ ಭಗವಂತನನ್ನು ಮುಟ್ಟುತ್ತದೆ. ಟೆಲಿಗ್ರಾಫ್ ತಂತಿಯಲ್ಲಿ ಬೇರೆ ವಸ್ತು ಬೆರೆತುಕೊಂಡಿದ್ದರೆ ಅಥವಾ ಅದು ಕಿತ್ತು ಹೋಗಿದ್ದರೆ ವಾರ್ತೆಯನ್ನು ಅದು ಹೊತ್ತುಕೊಂಡು ಹೋಗಲಾರದು.

❁ ಮುಖ್ಯವಾದುದೇನೆಂದರೆ ಭಗವಂತನನ್ನು ಪ್ರೀತಿಸಬೇಕು. ಅಗಾಧ ಪ್ರೀತಿಯುಂಟಾಯಿತು ಎಂದರೆ, ಆತನ ದರ್ಶನ ದೊರೆಯುತ್ತದೆ. ಸತಿಗೆ ಪತಿಯಲ್ಲಿರುವ ಪ್ರೀತಿ, ತಾಯಿಗೆ ಮಗುವಿನಲ್ಲಿರುವ ಪ್ರೀತಿ, ವಿಷಯಾಸಕ್ತನಿಗೆ ವಿಷಯವಸ್ತುಗಳಲ್ಲಿರುವ ಪ್ರೀತಿ – ಈ ಮೂರು ಪ್ರೀತಿಗಳನ್ನೂ ಒಟ್ಟುಗೂಡಿಸಿ ಭಗವಂತನ ಕಡೆ ತಿರುಗಿಸುವುದಾದರೆ ಆಗ ಆತನ ದರ್ಶನ ದೊರೆಯುತ್ತದೆ.

❁ ಭಗವಂತನ ಪ್ರಾರ್ಥನೆ ಮಾಡುವಾಗ ಯಾವುದಾದರೂ ಒಂದು ಭಾವವನ್ನು ಆಶ್ರಯಿಸಬೇಕು – ಸಖೀಭಾವವನ್ನೊ, ದಾಸೀಭಾವವನ್ನೊ, ಸಂತಾನಭಾವವನ್ನೊ ಅಥವಾ ವೀರಭಾವವನ್ನೊ.

❁ ನನ್ನದು ಸಂತಾನಭಾವ. ಈ ಭಾವವನ್ನು ನೋಡಿದೊಡನೆಯೇ ಮಾಯಾದೇವಿ ದಾರಿ ಬಿಟ್ಟು ನಿಂತುಕೊಳ್ಳುತ್ತಾಳೆ – ಲಜ್ಜೆಪಟ್ಟುಕೊಂಡು.

❁ ಅಹೇತುಕ ಭಕ್ತಿ – ಇದನ್ನು ನೀನು ಅಭ್ಯಾಸಮಾಡುವುದಾದರೆ, ನಿನಗೆ ಬಹಳ ಒಳ್ಳೆಯದಾಗುತ್ತದೆ. ಈ ವಿಧದ ಭಕ್ತಿಯನ್ನು ಹೊಂದಿದ ಭಕ್ತ ಹೇಳುತ್ತಾನೆ: 'ಹೇ ಭಗವಂತ, ಮುಕ್ತಿ, ಕೀರ್ತಿ, ಹಣ, ರೋಗ ಗುಣವಾಗುವಿಕೆ – ಇವು ಯಾವುವೂ ನನಗೆ ಬೇಡ, ನನಗೆ ನೀನೊಬ್ಬನೇ ಬೇಕು.' ಇದಕ್ಕೇ ಅಹೇತುಕ ಭಕ್ತಿ ಅಂತ ಹೆಸರು.

**ಶ್ರೀರಾಮಕೃಷ್ಣ ವಚನವೇದದಿಂದ**